# ಜಗದ ಜಲಗಾರ

ಬುದ್ಧನ ಬದುಕು ಮತ್ತು ಬೋಧನೆಗಳು ಹಿಂದೆಂದಿಗಿಂತಲೂ ಇಂದು ಪ್ರಸ್ತುತ. ಮಾನವ ಧರ್ಮ ಮತ್ತು ಅವನನ್ನು ಕುರಿತಾದ ಪ್ರೀತಿಯ ಮೂಲವಾದ ಬೌದ್ಧಧರ್ಮ ಲಿಂಗ, ಧರ್ಮದ ತರತಮವನ್ನು ಕುರಿತಂತೆ ಚಿಂತಿಸಿತು. ತಾನು ಕಾಣದ ದೈವದ ಚರ್ಚೆಯನ್ನು ಬೆಳೆಸದ ಬುದ್ಧನ ಕಾಳಜಿ ತಾನು ಹುಟ್ಟಿದ ಲೋಕದಲ್ಲಿಯೇ ಮುಕ್ತಿಯನ್ನು ಪಡೆಯುವುದು ಹೇಗೆ ಎಂಬುದ ಬಗ್ಗೆಯಾಗಿತ್ತು. ಪ್ರತಿಯೊಬ್ಬನು ಬೌದ್ಧ ಧರ್ಮದ ಮಾರ್ಗದಲ್ಲಿ ನಡೆದರೆ ತನ್ನನ್ನು ಕಾಡುವ ಯಾತನೆಗಳಿಂದ ಬಿಡುಗಡೆ ಪಡೆಯುವುದು ಸುಲಭ ಎಂಬುದನ್ನು ಬಲ್ಲವನಾಗಿದ್ದ. ಈ ಜ್ಞಾನವನ್ನೇ ಉಳಿದವರಿಗೂ ಬೋಧಿಸಿದ.

ತನ್ನ ಶಿಷ್ಯರೊಂದಿಗೆ ನೊಂದವರ ಬಳಿ ಹೋಗುತ್ತಿದ್ದ ಬುದ್ಧ ಅವರ ಪಾಲಿನ ದೈವವಾಗಿದ್ದ. ಅವನು ಕಂಡ, ಭೇಟಿ ನೀಡಿದ, ಚರ್ಚಿಸಿದ ವ್ಯಕ್ತಿಗಳೆಲ್ಲರೂ ಅವನ ಸರಳವಾದ ಬೋಧನೆಗಳಿಗೆ, ಆಚರಣೆಗಳಿಗೆ ಆಕರ್ಷಿತರಾಗುತ್ತಿದ್ದರು. ಅವರ ಪ್ರಶ್ನೆಗಳಿಗೆ, ಸಮಸ್ಯೆಗಳಿಗೆ ಬುದ್ಧನಿಂದ ಸಹಕಾರವಿದ್ದೇ ಇರುತ್ತಿತ್ತು. ಅವನ ಈ ಪರ್ಯಟನೆ ಭಕ್ತರನ್ನು ಹುಡುಕಿ ಅವರಿದ್ದೆಡೆಗೇ ಹೋಗುವ ದೈವದಂತಿತ್ತು. ಚರ್ಚೆ, ಸಂಶಯ, ಉತ್ತರಗಳ ಮೂಲಕವೇ ಜನರನ್ನು ತನ್ನಡೆಗೆ ಸೆಳೆಯುತ್ತಿದ್ದ ಬುದ್ಧ ಶಾಂತವಾದ ಸಾಗರದಂತಿದ್ದ. ಅವನೆಡೆಗೆ ಬಂದವರೆಲ್ಲಾ ತಮ್ಮ ಸಂಕಟಗಳಿಂದ ಹೊರಬರುವ ಶಕ್ತಿ ಪಡೆಯುತ್ತಿದ್ದರು. ಅವನು ಈ ರೀತಿ ಭೇಟಿ ಮಾಡಿದ ಮತ್ತು ಅವರ ಬದುಕನ್ನು ಬದಲಿಸಿದ ವ್ಯಕ್ತಿಗಳಲ್ಲಿ ಜಲಗಾರ ವೃತ್ತಿಗೆ ಸೇರಿದ ಸುನೀತನು ಒಬ್ಬನಾಗಿದ್ದ. ಜಲಗಾರ ಎಂಬ ಪದಕ್ಕೆ ಜಾಡಮಾಲಿ ಎಂಬ ಇನ್ನೊಂದು ಪದದ ಬಳಕೆಯೂ ಇದೆ. ಈ ಜಲಗಾರ ಬೀದಿಯನ್ನು ಗುಡಿಸುವವನಾಗಿದ್ದು ತನ್ನ ನೆರಳು ಸಹ ಬೇರೆಯವರ ಮೇಲೆ ಬೀಳದಂತೆ ಅವನು ಬದುಕಬೇಕಾಗಿತ್ತು. ಇದು ಅವನ ವಂಶಪಾರಂಪರ್ಯವಾಗಿ ಬಂದಿದ್ದ ವೃತ್ತಿಯಾಗಿತ್ತು.

ಒಂದು ದಿನ ಎಂದಿನಂತೆ ಮಲಿನ ಬೀದಿಯನ್ನು ಸ್ವಚ್ಛಗೊಳಿಸುತ್ತಿದ್ದಾಗ ಬುದ್ಧ ಎಂದಿನ ತನ್ನ ಉಡುಪು ಧರಿಸಿ ತನ್ನ ಶಿಷ್ಯರೊಂದಿಗೆ ಅದೇ ಬೀದಿಯಲ್ಲಿ ನಡೆದು ಬರುತ್ತಿದ್ದ. ಮೈಮೇಲೆ ಕೇವಲ ಒಂದೇ ಬಟ್ಟೆಯ ತುಂಡಿದ್ದು ಮಲಿನತೆಯಿಂದ ಕೂಡಿದ್ದ ಸುನೀತ, ಬುದ್ಧನನ್ನು ನೋಡಿ ಸಂತೋಷಗೊಂಡರೂ ತನ್ನ ವೃತ್ತಿಯ ಬಗೆಗಿನ ನಾಚಿಕೆಯಿಂದಾಗಿ ಅಲ್ಲಿಂದ ಮರೆಯಾಗಲು ಯತ್ನಿಸಿದ. ಆದರೆ ಮರೆಯಾಗಲು ಯಾವ ದಾರಿಯೂ ಸಿಗದೆ ತನ್ನ ಕೈಯ ಪೊರಕೆಯಿಂದಲೇ ಮುಖವನ್ನು ಮರೆಮಾಚಿಕೊಳ್ಳಲು ಪ್ರಯತ್ನಿಸಿದ. ಗೋಡೆಗೆ ಅಂಟಿಕೊಂಡಂತೆ ನಿಂತು ನಮಸ್ಕರಿಸಿದ ಸುನೀತನ ಹತ್ತಿರ ಬಂದ ಬುದ್ಧ 'ನೀನು ಈ ಕೆಲಸವನ್ನು ಬಿಟ್ಟು ನನ್ನೊಡನೆ ಬರುವೆಯಲ್ಲವೆ' ಎಂದು ಪ್ರೀತಿಯಿಂದ ಆಹ್ವಾನಿಸುತ್ತಾನೆ. ಯಾರಿಂದಲೂ ಪ್ರೀತಿಯ ಮಾತನ್ನು ಕೇಳದಿದ್ದ ಅವನು ಬುದ್ಧನೊಡನೆ ತೆರಳಿ ಭಿಕ್ಷುವಾಗುತ್ತಾನೆ. ತಾನು ಜಾತಿಯ ಹಂಗನ್ನು ಕಳೆದುಕೊಂಡು ಬೌದ್ಧಧರ್ಮಕ್ಕೆ ಸೇರಿ ಹೋಗುತ್ತಾನೆ. ಬುದ್ಧ ಅವನನ್ನು ಕುರಿತು 'ಕೊಳೆತ ಮಲಿನ ರಾಶಿಯ ಮೇಲೆ ಅರಳಿ ಸುಗಂಧವ ಚೆಲ್ಲುತ್ತಿದ್ದ ನೈದಿಲೆಯೊಂದು ತನ್ನ ಕತ್ತಲನು ಕಳೆದು ಬೆಳಕಿಗೆ ಬಂದಿದೆ' ಎನ್ನುತ್ತಾನೆ. ಈ ಸಂದರ್ಭ ಬುದ್ಧನೇ ದುರ್ಬಲರ ಬಳಿಗೆ ಚಲಿಸಿ ಅವರ ಯಾತನೆಗಳನ್ನು ಹೋಗಲಾಡಿಸುವ ಕತೆಯನ್ನು ಹೇಳುತ್ತದೆ.

ಬುದ್ಧನನ್ನು ಬಿಟ್ಟರೆ ಗಾಂಧಿ ದಲಿತರ ನೋವು, ಅಪಮಾನಗಳನ್ನು ಅರಿತವರಾಗಿದ್ದರು. ಅಪಮಾನಿತರನ್ನು ಹರಿಜನ ಎಂದು ಕರೆದಿದ್ದಲ್ಲದೆ ಅವರ ಪರವಾಗಿ ಮಿಡಿದವರೂ, ಚಿಂತಿಸಿದವರೂ ಆಗಿದ್ದರು. ಸಾಹಿತ್ಯದಲ್ಲಿ ದಲಿತತ್ವದ ಕಲ್ಪನೆ ಮತ್ತು ಅದರ ಬಿಡುಗಡೆಯ ಬಗ್ಗೆ ಚಿಂತಿಸಿದವರಲ್ಲಿ ಕುವೆಂಪು ಅವರಿಗೆ ವಿಶೇಷ ಸ್ಥಾನವಿದೆ. ಸ್ವತಃ ವೈದಿಕೇತರ ಹಿನ್ನೆಲೆಯಿಂದ ಬಂದಿದ್ದ ಕುವೆಂಪು ಈ ಸಮಸ್ಯೆಯನ್ನು ಸಾಹಿತ್ಯದ ಅಭಿವ್ಯಕ್ತಿಯ ಮೂಲಕ ಎದುರಿಸಿದ ಮೊದಲ ಶೂದ್ರ ಮುಖ್ಯಲೇಖಕ. ಅಸಾಮಾನ್ಯ ಪ್ರತಿಭಾವಂತರೂ, ನವಯುಗ ಸಾಹಿತ್ಯ ನಿರ್ಮಾಪಕರೂ ಆಗಿದ್ದ ಕುವೆಂಪು ಅದನ್ನು ಸಾಹಿತ್ಯಕವಾಗಿ, ಸಾಂಸ್ಕೃತಿಕವಾಗಿ ಎದುರಿಸಿದರು. ಅವರು ಬರೆದ ನಾಟಕಗಳಾದ ಜಲಗಾರ, ಶೂದ್ರತಪಸ್ವಿ, ಬೆರಳ್ಗೆ ಕೊರಳ್– ಈ ಮೂರು ನಾಟಕಗಳು ಮೊದಲ ತಲೆಮಾರಿನ ಅಕ್ಷರ ಕಲಿತ ಲೇಖಕನೊಬ್ಬ ವೈಯಕ್ತಿಕವಾಗಿ ಎದುರಿಸಿದ ಸಮಸ್ಯೆಯನ್ನೇ ವಸ್ತುವನ್ನಾಗಿಸಿಕೊಂಡವು. ಜಾತೀಯತೆ, ಅಸ್ಪೃಶ್ಯತೆಗೆ ಪರ್ಯಾಯವಾಗಿ ಪ್ರತಿಮಾತ್ಮಕವಾದ ಪ್ರತಿಭೆಯ ಚಿತ್ರಗಳನ್ನು ಕಟ್ಟಿಕೊಟ್ಟರು.

ಜಲಗಾರ ಪುರೋಹಿತಶಾಹಿಯನ್ನು ನೇರವಾಗಿ ಎದುರಿಸಿದ ನಾಟಕ. 1928ರಲ್ಲಿ ರಚಿತವಾದ ಈ ನಾಟಕಕ್ಕೆ ಹಿನ್ನೆಲೆಯಾಗಿ ಕೇರಳ ಮತ್ತು ತಮಿಳುನಾಡಿನಲ್ಲಿ ನಡೆದ ಅವೈದಿಕ ಚಳವಳಿಗಳು ಕೆಲಸ ಮಾಡಿವೆ. 12ನೇ ಶತಮಾನದ ಶರಣರು ಎತ್ತಿಹಿಡಿದ ಕಾಯಕ ಚಳವಳಿಯ ಮಹತ್ವವನ್ನು ಈ ನಾಟಕ ಅರಗಿಸಿಕೊಂಡಿದೆ. ಕಾಯಕದ ಮುಂದೆ ದೈವವೂ ಇಲ್ಲ, ಧರ್ಮವೂ ಇಲ್ಲ ಎಂಬ ವಿಚಾರವನ್ನು ಇಲ್ಲಿ ಎತ್ತಿಹಿಡಿಯಲಾಗಿದೆ. ಎರಡು ದೃಶ್ಯಗಳ ಈ ನಾಟಕದಲ್ಲಿ, ದೇವಸ್ಥಾನವೇ ಕೇಂದ್ರ. ದೇವರು ದೇವಸ್ಥಾನದಲ್ಲಿದ್ದಾನೆ, ಪುರೋಹಿತರ ಪೂಜೆಯಲ್ಲಡಗಿದ್ದಾನೆ ಎಂಬ ನಂಬಿಕೆಯ ಕೇಂದ್ರವನ್ನು ಅಲುಗಾಡಿಸುವ ಕೆಲಸವನ್ನು ಇಲ್ಲಿ ಮಾಡಲಾಗಿದೆ.

ಮೊದಲ ದೃಶ್ಯದಲ್ಲಿ ಸಮಾಜಕ್ಕೆ ಸೇರಿದ ವಿವಿಧ ವರ್ಗದವರು ಶಿವನನ್ನು ಕಾಣಲೆಂದು ಶಿವಾಲಯಕ್ಕೆ ಹೋಗುತ್ತಿದ್ದಾರೆ. ಆದರೆ ಜಲಗಾರ ತನ್ನ ಕಾಯಕದಲ್ಲೆ ಕೈಲಾಸ, ಆ ಕೈಲಾಸದಲ್ಲಿಯೇ ಶಿವನನ್ನು ಕಂಡವನು. ತನ್ನ ಕೆಲಸ ಬಿಟ್ಟು ಆಲಯಕ್ಕೆ ಹೋಗುವ ಯೋಚನೆಯನ್ನೇ ಅವನು ಒಪ್ಪುವುದಿಲ್ಲ. ಅವನ ಕಾಯಕನಿಷ್ಠೆ ಮೆಚ್ಚಿ ತಾನೇ ಅವನ ಬಳಿ ಬರುವ ಶಿವ ಉದಾರದೈವವೆಂಬಂತೆ ಚಿತ್ರಿತನಾಗುತ್ತಾನೆ. ಜಲಗಾರನ ಹಾಡುವಿಕೆಯನ್ನು ಅನುಮಾನಿಸುವ ಸಾರ್ವರು 'ಗಾನದೇವಿಯು ಹೀನ ಜಲಗಾರನನ್ ಒಲಿಯುವಳೆ' ಎಂದು ಅವಮಾನಿಸುತ್ತಾರೆ. 'ಶೂದ್ರರೊಳ್ ಕವಿವರ್ಯರುದಿಸುವರೆ? ಹುಟ್ಟುವರೆ ಪಂಡಿತರ್? ಜನಿಸುವರೆ ಶಿಲ್ಪಿಗಳ್? ಗಾಯಕರ್? ಯೋಗಿಗಳ್? ಅಸದಳಂ' ಎಂಬ ಮಾತು ಕುವೆಂಪು ಕಂಡ ತಮ್ಮ ಕಾಲದಲ್ಲಿನ ಸಾಮಾಜಿಕ ಹಾಗೂ ಸಾಂಸ್ಕೃತಿಕ ತರತಮವನ್ನು ಅಭಿವ್ಯಕ್ತಿಸುವಂತಿದೆ. ಈ ಪ್ರಶ್ನೆಯಾದರೂ ಅವರಲ್ಲಿ ಜಾಗೃತವಾದದ್ದರ ನೆಲೆಯಲ್ಲಿ ಶರಣ ಚಳವಳಿ, ಗಾಂಧೀಜಿ ವಿಚಾರಧಾರೆ, ಕರ್ಮ ಸಿದ್ಧಾಂತ ಕುರಿತಾದ ಚರ್ಚೆ, ಆಧುನಿಕ ಶಿಕ್ಷಣ ಕ್ರಮದಿಂದ ಬದಲಾಗುತ್ತಿರುವ ವಿಚಾರಧಾರೆಗಳು ಪ್ರಭಾವಿಸಿವೆ.

ಮೇಲಿನ ಸುನೀತನೆಂಬ ಬುದ್ಧನ ಶಿಷ್ಯನ ಕತೆ ಹಾಗೂ ಕುವೆಂಪು ಚಿತ್ರಿಸಿದ ಕತೆ ಜಲಗಾರನನ್ನು ಕುರಿತಾದ ಚಿತ್ರಣವಾದರೂ ಹೇಳುವ ರೀತಿಯಲ್ಲಿ ಭಿನ್ನತೆಯಿದೆ. ಬುದ್ಧನ ಕರುಣೆಯ ಕಣ್ಣ ನೋಟಕ್ಕೆ ಸಿಲುಕುವ ಸುನೀತನೆಂಬ ಜಲಗಾರ, ಕಾಯಕದಲ್ಲಿಯೇ ಕೈಲಾಸ ಕಾಣುವ ಜಲಗಾರನ ಮುಂದೆ ನಿಂತ ಶಿವ – ಬದಲಾದ ಆಶಯಗಳ ಪ್ರತಿನಿಧಿಗಳೆಂಬಂತೆ ತೋರುತ್ತಾರೆ.

■ **ಅಮೃತಮತಿ**

## ಮಾತೇ ಮುತ್ತು

- ಪ್ರಪಂಚವೊಂದು ಅದ್ಭುತ ಪುಸ್ತಕ. ಅದನ್ನೋದಲು ಬಾರದವನು ನಿರುಪಯುಕ್ತ.
  —ಸ್ವಾಮಿ ವಿವೇಕಾನಂದ
- ದೇವರಿಲ್ಲ ಎಂಬುವರಿಗೂ ಇದ್ದಾನೆ ಎಂಬುವರಿಗೂ ಒಂದಿಷ್ಟೂ ವ್ಯತ್ಯಾಸವಿಲ್ಲ.
  —ಶಿವರಾಮ ಕಾರಂತ
- ಜನಕ್ಕೆ ಪ್ರಯೋಜನವಾಗಲಿ ಎಂದು ಹೂವು ಅರಳುವುದಿಲ್ಲ. ಆದರೆ ಪ್ರಯೋಜನವಾಗುತ್ತದೆ.
  —ಅನಕೃ
- ಪ್ರಜಾಪ್ರಭುತ್ವದಲ್ಲಿ ಬಲಿಷ್ಠನಿಗೆ ಇರುವಷ್ಟೇ ಅವಕಾಶಗಳು ದುರ್ಬಲನಿಗೂ ಇರಬೇಕು.
  —ಮಹಾತ್ಮ ಗಾಂಧಿ
- ಚರಿತ್ರೆಯ ಪರಿಣಾಮಗಳು ಎರಡು; ಒಂದು ಬೌದ್ಧಿಕ ಸಂತೋಷ. ಎರಡು ನೈತಿಕ ದುಃಖ.
  —ರಾಲ್ಫ್ ವಾಲ್ಡೊ ಎಮರ್ಸನ್